**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಅಸಲು ದಾವಾ ನಂ.288/2012**

ಪಿ.**ಡಬ್ಲ್ಯೂ:1**

**ಹೆಸರು** : ಮಧುಸೂದನ

ತಂದೆ **ಹೆಸರು** : ತೇಜಪ್ಪ

**ವಯಸ್ಸು** : **26 ವರ್ಷ**

**ಉದ್ಯೋಗ** : ಭೂ ಮಾಪಕರು

**ವಾಸಸ್ಥಳ** : ತರೀಕೆರೆ

**ದಿನಾಂಕ. 07-10-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :**

ದಿನಾಂಕ: *24-02-2020* ರಂದು ನಾನು ನ್ಯಾಯಾಲಯದ ಆದೇಶದಂತೆ ದಾವ ಸ್ವತ್ತಿನ ಅಳತೆ ಕಾರ್ಯ ಮಾಡಿರುತ್ತೇನೆ. ಅಳತೆ ಮಾಡುವ ಮೊದಲು ಉಭಯಪಕ್ಷಗಾರರಿಗೆ ನೋಟೀಸನ್ನು ನೊಂದಣಿ ಅಂಚೆ ಮೂಲಕ ನೀಡಿರುತ್ತೇನೆ. ವಾದಿಯು ನೋಟೀಸನ್ನು ಪಡೆದಿದ್ದು, ಪ್ರತಿವಾದಿಯರು ಪಡೆದಿರುವುದಿಲ್ಲ. ನಾನು ಸ್ಥಳಕ್ಕೆ ಅಳತೆ ಮಾಡಲು ಹೋದಾಗ ವಾದಿ ಮತ್ತು ಇನ್ನೊಬ್ಬರು ಇದ್ದರು. ಪ್ರತಿವಾದಿಯರು ಹಾಜರಿರಲಿಲ್ಲ. ನಾನು ಅಳತೆ ಮಾಡಿದಾಗ ಸರ್ವೆ ನಂ. *35/7* ರಲ್ಲಿ ತಿಮ್ಮಕ್ಕ ಎನ್ನುವವರು ಒಂದೂವರೆ ಗುಂಟೆ ಜಾಗವನ್ನು ಒತ್ತುವರಿ ಮಾಡಿರುವುದು ಕಂಡುಬಂದಿದ್ದು, ಮಮತ ಮತ್ತು ರಮ್ಯರವರು ಮೂರು ಗುಂಟೆ ಜಾಗವನ್ನು ಒತ್ತುವರಿ ಮಾಡಿರುವ ಬಗ್ಗೆ ಕಂಡುಬಂದಿರುತ್ತದೆ. ಆದರೆ ಸದರಿ ತಿಮ್ಮಕ್ಕ, ಮಮತ ಮತ್ತು ರಮ್ಯರವರ ಹೆಸರಿನಲ್ಲಿ ಪಹಣಿ ಇರುವುದಿಲ್ಲ, ಆದರೆ ಅವರ ತಂದೆ ನಾರಾಯಣಪ್ಪನ ಹೆಸರಿನಲ್ಲಿ ಸರ್ವೇ ನಂ. *35/1* ಮತ್ತು ಸರ್ವೆ ನಂ. *35/3* ಪಹಣಿ ಇರುವುದು ಕಂಡುಬಂದಿರುತ್ತದೆ. ನಾನು ಅಳತೆ ಕಾರ್ಯ ಮಾಡಿ ನಕ್ಷೆ ತಯಾರಿಸಿ, ಮಹಜರ್ ಮಾಡಿ, ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಮಹಜರ್ ಮಾಡಿದಾಗ ವಾದಿ, ದರ್ಶನ್ ಮತ್ತು ಇನ್ನೊಬ್ಬರು ಹಾಜರಿದ್ದರು.

ಸಾಕ್ಷಿಯು ವಾರೆಂಟ್ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಸಿ-*1* ಎಂದು ವಾದಿ ಮತ್ತು ಪ್ರತಿವಾದಿ ಮೆಮೋ ಆಫ್ ಇನ್‌ಸ್ಟ್ರಕ್ಷಷನ್‌ನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಸಿ-*2* ಮತ್ತು *3* ಎಂದು, ಒಟ್ಟು ಹತ್ತು ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಸಿ-*4* ಎಂದು

ಗುರುತಿಸಲಾಯ್ತು. ನೋಟೀಸಿನ ಎರಡು ಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಸಿ-*5* ಮತ್ತು ನಿಸಿ-*6* ಎಂದು ಗುರುತಿಸಲಾಯ್ತು. ಹೇಳಿಕೆಯ ಎರಡು ಪ್ರತಿಯನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಸಿ-*7* ಮತ್ತು ನಿಪಿ-*8* ಎಂದು ಗುರುತಿಸಲಾಯಿತು. ನಕ್ಷೆಯ ಪ್ರತಿಯನ್ನು ನಿಸಿ-*9* ಎಂದು ಗುರುತಿಸಲಾಯ್ತು. ಸೂಚನಾವಳಿಗಳಿಗೆ ನೀಡಿದ ಉತ್ತರಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಸಿ-*10* ಮತ್ತು *11* ಎಂದು ಗುರುತಿಸಲಾಯ್ತು. ವರದಿಯನ್ನು ನಿಸಿ-*12* ಎಂದು ಗುರುತಿಸಲಾಯ್ತು.

***ಪಾಟೀ ಸವಾಲು: ಪ್ರತಿವಾದಿಗಳ ಶ್ರೀ ಹೆಚ್ ಎಸ್ ಎನ್ ವಕೀಲರಿಂದ.***

ಸಾಮಾನ್ಯವಾಗಿ ಯಾವುದೇ ಸ್ವತ್ತಿನ ಅಳತೆ ಮಾಡುವಾಗ ಪಕ್ಷಗಾರರು ಮತ್ತು ಸುತ್ತಲಿನ ಜನರಿಗೆ ನೊಟೀಸು ನೀಡಬೇಕು ಎಂದರೆ ಸರಿ. ದಾವ ಸ್ವತ್ತಿನ ಅಕ್ಕಪಕ್ಕದವರಿಗೆ ನೋಟೀಸು ನೀಡಿರುವುದಿಲ್ಲ. ನಾನು ಪ್ರತಿವಾದಿಯರಿಗೆ ಅಂಚೆ ಮೂಲಕ ನೋಟೀಸನ್ನು ನೀಡಿದ್ದು, ಆದರೆ ಅವರು ತಿರಸ್ಕರಿಸಿರುತ್ತಾರೆ. ನನಗೆ ವಾಪಸ್ಸು ಬಂದ ಅಂಚೆ ಲಕೋಟೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸಾಕ್ಷಿಯು ಮುಂದುವರಿದು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂ. *35* ರಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದು ದಾಖಲೆ ನೋಡಿ ಹೇಳಬೇಕಾಗುತ್ತದೆ.

**ಈ ಹಂತದಲ್ಲಿ ಸಾಕ್ಷಿಯು ಸ್ವತ್ತಿನ ಮೂಲ ದಾಖಲೆಗಳನ್ನು ಪರಿಶೀಲಿಸಿ ಸಾಕ್ಷಿ ಹೇಳಬೇಕಾಗುತ್ತದೆ ಎಂದು ನುಡಿದು ಸಮಯ ಕೇಳಿದ್ದರಿಂದ, ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ನೀಡಿ ಮುಂದೂಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

Sd/-

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***

***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***